ಸಂಯುಕ್ತ ಕರ್ನಾಟಕ
ಹುಬ್ಬಳ್ಳಿ–ಬೆಂಗಳೂರು

ನಿಮ್ಮೂರಲ್ಲಿ - ನಮ್ಮವರು

ನಮ್ಮ ಪ್ರಕಟಣೆಗಳಾದ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆ, 'ಕರ್ಮವೀರ' ವಾರಪತ್ರಿಕೆ ಹಾಗೂ 'ಕಸ್ತೂರಿ' ಮಾಸ ಪತ್ರಿಕೆ ಬೇಕಾದಲ್ಲಿ ಹಾಗೂ ಚಂದಾದಾರಾಗಲು ದಯವಿಟ್ಟು ಈ ಕೆಳಗಿನ ಪ್ರತಿನಿಧಿಗಳನ್ನು ಸಂಪರ್ಕಿಸಿ.

ಪ್ರಸಾರಾಂಗ
ಮಲ್ಲಿಕಾರ್ಜುನ ಕೆ. 91085 14014
ಪ್ರಸಾರಾಂಗ ವಿಭಾಗ, ಹುಬ್ಬಳ್ಳಿ 0836/2364305
ಹಿರಿಯ ಪ್ರಸಾರಾಂಗ ವ್ಯವಸ್ಥಾಪಕರು 76250 66319

ಜಾಹೀರಾತುಗಳಿಗಾಗಿ
ಪರಮೇಶ ರೆಡ್ಡಿ 95902 76300

ಸುದ್ದಿಗಳಿಗಾಗಿ
ಬಳ್ಳಾರಿ : ಮಲ್ಲಿಕಾರ್ಜುನ 99020 08424
ಹೊಸಪೇಟೆ : ಕೆ. ಲಕ್ಷ್ಮಣ 94492 04302
ಗೋವಾ : ಪ್ರಕಾಶ ಭಟ್ 98609 98528

ಸಾವಿರಾರು ದಿನದ ಹೋರಾಟ | ವಶಪಡಿಸಿಕೊಂಡ ಭೂಮಿಗೆ ಮಾರುಕಟ್ಟೆ ಮೌಲ್ಯ ನೀಡಿ | ನೆಲ ಪಡೆದ ರೈತರನನ್ನು ಕಡೆಗಣಿಸದಿರಿ

ಕುಡಿತಿನಿ ಭೂ ಸಂತ್ರಸ್ತರಿಂದ ಬಳ್ಳಾರಿ ಬಂದ್

ಬಳ್ಳಾರಿ: ಕೈಗಾರಿಕೆ ಸ್ಥಾಪನೆ ಉದ್ದೇಶಕ್ಕಾಗಿ ವಶಪಡಿಸಿಕೊಂಡ ಜಮೀನಿನಲ್ಲಿ ಇದುವರೆಗೆ ಯಾವುದೇ ಉದ್ಯಮಗಳು ಸ್ಥಾಪನೆ ಆಗಿಲ್ಲ. ರೈತರಿಗೆ ನ್ಯಾಯಯುತ ಪರಿಹಾರವೂ ನೀಡಿಲ್ಲ. ಹೀಗಾಗಿ ರೈತರು ಜಮೀನು ವಾಪಸ್ಸು ಕೊಡಿ ಇಲ್ಲವೇ ಸೂಕ್ತ ಭೂ ಪರಿಹಾರ ನೀಡಲು ಆಗ್ರಹಿಸಿ ಸಾವಿರಾರು ದಿನಗಳಿಂದ ಹೋರಾಟ ನಡೆಸುತ್ತಿರುವ ಕುಡಿತಿನಿ ಭೂ ಸಂತ್ರಸ್ತರು ಗುರುವಾರ ಬಳ್ಳಾರಿ ಬಂದ್‌ಗೆ ಕರೆ ನೀಡಿ ಬೃಹತ್ ಹೋರಾಟ ನಡೆಸಿದರು.

ಬಳ್ಳಾರಿ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾದರೂ ರೈತರ ಹೋರಾಟ ಮಾತ್ರ ತೀವ್ರವಾಗಿತ್ತು. ಸರ್ಕಾರ ವಶಪಡಿಸಿಕೊಂಡ ಭೂಮಿಗೆ ನ್ಯಾಯಯುತ ಪರಿಹಾರ ಮತ್ತು ಭೂಮಿಯ ಮಾರುಕಟ್ಟೆ ಮೌಲ್ಯ ನೀಡುವಂತೆ ಆಗ್ರಹಿಸಿ ಕುಡಿತಿನಿಯಿಂದ ಬಳ್ಳಾರಿವರೆಗೂ ಆಗಮಿಸಿದ್ದರು.

ನಗರದ ರಾಯಲ್ ವೃತ್ತದಲ್ಲಿ ಸೇರಿದ್ದ ಸಾವಿರಾರು ಸಂಖ್ಯೆಯ ರೈತರು ಆರಂಭದಲ್ಲಿ ಬೈಕ್ ರ್‍ಯಾಲಿ ನಡೆಸಿ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ಬಳ್ಳಾರಿ ಬಂದ್‌ಗೆ ಬೆಂಬಲ ನೀಡುವಂತೆ ಮನವಿ ಮಾಡಿದರು. ಬಳಿಕ ರಾಯಲ್ ಸರ್ಕಲ್‌ನಿಂದ ಪಾದಯಾತ್ರೆ ಮೂಲಕ ಬೆಂಗಳೂರು ರಸ್ತೆ, ಹಳೆ ಬ್ರೂಸ್‌ಪೇಟೆ ಪೊಲೀಸ್ ಠಾಣೆ, ಜೈನ್ ಮಾರ್ಕೆಟ್, ಮೋತಿ ಸರ್ಕಲ್ ಹಾಗೂ ರೈಲ್ವೆ ನಿಲ್ದಾಣ ಮಾರ್ಗವಾಗಿ ಸಂಚರಿಸಿ ಪುನಃ ರಾಯಲ್ ಸರ್ಕಲ್‌ಗೆ ತಲುಪಿತು. ಈ ವೇಳೆ ಪ್ರತಿಭಟನಾಕಾರರು ಸರ್ಕಾರ ಹಾಗೂ ಕೆಐಎಡಿಬಿ ವಿರುದ್ಧ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಪ್ರತಿಕೃತಿ ದಹಿಸಿ ತಮ್ಮ ಆವೇಶ ಹೊರ ಹಾಕಿದರು.



ಕುಡಿತಿನಿ ಭೂ ಸಂತ್ರಸ್ತರಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ಬಳ್ಳಾರಿ ಬಂದ್‌ಗೆ ಕರೆ ನೀಡಿ ಪ್ರತಿಭಟನೆ ನಡೆಸಲಾಯಿತು.

ಕುಡುತಿನಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಸಾವಿರಾರು ಎಕರೆ ಭೂಮಿಯನ್ನು ಬ್ರಹ್ಮಿಣಿ, ಮಿತ್ತಲ್, ಎನ್‌ಎಂಡಿಸಿ ಸೇರಿದಂತೆ ವಿವಿಧ ಕೈಗಾರಿಕೆಗಳ ಸ್ಥಾಪನೆಗಾಗಿ ಸುಮಾರು 15 ವರ್ಷಗಳ ಹಿಂದೆ ವಶಪಡಿಸಿಕೊಂಡಿವೆ. ಆದರೆ, ಭೂಮಿ ಕಳೆದುಕೊಂಡ ರೈತರಿಗೆ ಈವರೆಗೆ ನ್ಯಾಯಯುತ ಪರಿಹಾರ ಮತ್ತು ಮಾರುಕಟ್ಟೆ ಮೌಲ್ಯದ ಬೆಲೆ ದೊರೆತಿಲ್ಲ.

ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ವಶಪಡಿಸಿಕೊಂಡ ಭೂಮಿಯನ್ನು ಹತ್ತು ವರ್ಷಗಳೊಳಗೆ ಆ ಉದ್ದೇಶಕ್ಕೆ ಬಳಸಬೇಕು. ಇಲ್ಲವಾದಲ್ಲಿ ಭೂಮಿಯನ್ನು ಮೂಲ ಮಾಲೀಕರಿಗೆ ಮರಳಿಸಬೇಕು ಎಂಬ ನಿಯಮವಿದೆ. ಆದರೆ, ಭೂಮಿಯನ್ನು ಬಳಸದೆ ಇಟ್ಟಿದ್ದರೂ ಸರ್ಕಾರ ಅದನ್ನು ಹಿಂದಿರುಗಿಸುತ್ತಿಲ್ಲ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

> **ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ವಶಪಡಿಸಿಕೊಂಡ ಭೂಮಿಯನ್ನು ಹತ್ತು ವರ್ಷಗಳೊಳಗೆ ಆ ಉದ್ದೇಶಕ್ಕೆ ಬಳಸಬೇಕು. ಇಲ್ಲವಾದಲ್ಲಿ ಭೂಮಿಯನ್ನು ಮೂಲ ಮಾಲೀಕರಿಗೆ ಮರಳಿಸಬೇಕು ಎಂಬ ನಿಯಮವಿದೆ. ಆದರೆ, ಭೂಮಿಯನ್ನು ಬಳಸದೆ ಇಟ್ಟಿದ್ದರೂ ಸರ್ಕಾರ ಅದನ್ನು ಹಿಂದಿರುಗಿಸುತ್ತಿಲ್ಲ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.**

ಪ್ರತಿಭಟನೆಯ ಹಿನ್ನೆಲೆಯಲ್ಲಿ ನಗರದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ಏರ್ಪಡಿಸಿತ್ತು. ಭೂ ಸಂತ್ರಸ್ತ ರೈತರಿಗೆ ನ್ಯಾಯ ಸಿಗುವವರೆಗೆ ಹೋರಾಟ ಮುಂದುವರಿಯಲಿದೆ ಎಂದು ಹೋರಾಟಗಾರರು ಎಚ್ಚರಿಕೆ ನೀಡಿದರು. ಭೂ ಸಂತ್ರಸ್ತರ ಹೋರಾಟ ಸಮಿತಿಗೆ ವಿವಿಧ ರೈತ, ಕಾರ್ಮಿಕ, ಮಹಿಳಾ ಹಾಗೂ ಪ್ರಗತಿಪರ ಸಂಘಟನೆಗಳು ಬೆಂಬಲ ಸೂಚಿಸಿದ್ದವು. ಬಳಿಕ ಜಿಲ್ಲಾಧಿಕಾರಿ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದರು.

ನಾಮಫಲಕ ಅಳವಡಿಸಿದ ಗುತ್ತಿಗೆದಾರರು

ಸಂ.ಕ.ಸಮಾಚಾರ ಗೋಕರ್ಣ: ತದಡಿ–ಅಘನಾಶಿನಿ ನಡುವೆ ಸಂಚರಿಸುವ ಬಂದ್ ಮಾಡಿರುವ ಕಾರಣ ತಿಳಿಸುವ ನಾಮಫಲಕವನ್ನು ಬಾರ್ಜ್ ನಡೆಸುವ ಗುತ್ತಿಗೆದಾರರು ಅಳವಡಿಸಿದ್ದಾರೆ. ಸಾರ್ವಜನಿಕರಿಗೆ ಯಾವುದೇ ಸೂಚನೆ, ಮಾಹಿತಿ ನೀಡದೆ ಏಕಾಏಕಿ ಸಂಚಾರ ಬಂದ್ ಮಾಡಿರುವುದರಿಂದ ನಿತ್ಯ ತೆರಳುವ ಜನರಿಗೆ ತೊಂದರೆಯಾಗುತ್ತಿದೆ. ಗುರುವಾರ ಪತ್ರಿಕೆಯಲ್ಲಿ ವರದಿ ಬಂದ ಬಳಿಕ ಎಚ್ಚೆತ್ತುಕೊಂಡಿದ್ದಾರೆ.

SK CLASSIFIED

ಹುಬ್ಬಳ್ಳಿ ಆವೃತ್ತಿ ದರ

ಅಳತೆ	ದರ	ಕೊಡುಗೆ
4x5	790/-	3+1 - 5+2
4x10	1260/-	3+1 - 5+2

ಬೇಕಾಗಿದ್ದಾರೆ
ಹುಬ್ಬಳ್ಳಿಯ ಅಕ್ಷಯ ಪಾತ್ರ ಫೌಂಡೇಶನ್‌ನಲ್ಲಿ ಕೆಲಸ ಮಾಡಲು
ಪುರುಷ ಅಡುಗೆ ಸಹಾಯಕರು & ಡ್ರೈವರ್ ಬೇಕಾಗಿದ್ದಾರೆ
ಉಚಿತ ಊಟ & ವಸತಿಯೊಂದಿಗೆ
ಸಂಬಳ ರೂ. 20, 000/-
ಕರೆ ಮಾಡಿ
9611320581

ಬೇಕಾಗಿದ್ದಾರೆ
ಹುಬ್ಬಳ್ಳಿಯಲ್ಲಿ ಕೆಲಸ ನಿರ್ವಹಿಸಲು ಕಾರ್ ಡ್ರೈವರ್ ಹಾಗೂ ಚಾಕಲೇಟ್ ಡಿಸ್ಟ್ರಿಬ್ಯೂಟರ್ಸ್ ಬೇಕಾಗಿದ್ದಾರೆ.
ಕಿಶೋರ್ ನಾವೆಲ್ಟೀಸ್ & ಪರ್‌ಫ್ಯೂಮ್ಸ್
ಮದನಿ ಕಾಲೋನಿ, ಯಲ್ಲಾಪೂರ ಓಣಿ ಹಾಗೂ ಪೆಂಡಾರ್ ಗಲ್ಲಿ
-: ಆಸಕ್ತರು ಸಂಪರ್ಕಿಸಿರಿ :-
9108563974

ಓದುಗರ ಗಮನಕ್ಕೆ: ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ–ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. –ಜಾಹೀರಾತು ವ್ಯವಸ್ಥಾಪಕರು

NEFT (ನೆಫ್ಟ್) ಮೂಲಕ ಬ್ಯಾಂಕ್ ಖಾತೆಗೆ ಹಣ ಸಂದಾಯಿಸುವ ವಿವರ
1) A/c No. (ಖಾತೆ ಸಂ.) 0832000101347401
2) IFSC CODE (ಐಎಫ್‌ಎಸ್‌ಸಿ ಸಂಕೇತ): KARB 0000083
3) ಹಣ ಸಂದಾಯದ ಹೆಸರು: LOKA SHIKSHANA TRUST
4) ಬ್ಯಾಂಕ್ ಹೆಸರು : KARNATAKA BANK
BRANCH: KASTURBA ROAD, BANGALORE-560001.
5) ಫ್ಯಾಸ್ ಸಂಖ್ಯೆ: AAATL 1086H
6) ಪಿ.ಸೂ: ತಾವು ಜಮೆ ಮಾಡಿದ ಪೇ ಇನ್ ಸ್ಲಿಪ್ ಜೊತೆಗೆ ಪ್ರಕಟಿಸಬೇಕಾದ ಜಾಹೀರಾತನ್ನು ಸಂ.ಕ. ಕಚೇರಿಗೆ ಕಳುಹಿಸಬೇಕು.
* ಡಿ.ಡಿ. ಕಳಿಸುವುದಿದ್ದಲ್ಲಿ ಸಂಯುಕ್ತ ಕರ್ನಾಟಕ ಹೆಸರಿನಲ್ಲಿ ಕಳುಹಿಸಬೇಕು.

Edition	Bangalore	Gulburga	Davanagere	Mangalore	All Edition
*Disply Classified	Rs. 40-00	Rs.15-00	Rs. 15-00	Rs. 15-00	Rs.80-00

ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಚಿಕ್ಕ ಜಾಹೀರಾತು..... ಅಗಾಧ ಫಲಿತಾಂಶ! ಜಾಹೀರಾತಿಗಾಗಿ ಸಂಪರ್ಕಿಸಿರಿ:
ಸಂಪರ್ಕಿಸಿರಿ: ಮೊ: 9900049656
ಇ–ಮೇಲ್: skhubli@gmail.com

11 ಸೂಕ್ಷ್ಮ ಪ್ರದೇಶಗಳಲ್ಲಿ ಮೊಹರಂ ಹಬ್ಬ ನಿಷೇಧ

ಸಂ.ಕ.ಸಮಾಚಾರ ಬಳ್ಳಾರಿ: ಹಿಂದೂ–ಮುಸ್ಲೀಂ ಸಮುದಾಯಗಳ ಭಾವೈಕ್ಯ ಹಬ್ಬವಾಗಿರುವ ಮೊಹರಂ ಹಬ್ಬವನ್ನು ಶಾಂತಿ–ಸೌಹಾರ್ದಯುತವಾಗಿ ಆಚರಿಸುವ ನಿಟ್ಟಿನಲ್ಲಿ ಪೊಲೀಸ್ ಮತ್ತು ಜಿಲ್ಲಾಡಳಿತ ಶಾಂತಿ ಸಭೆಗಳನ್ನು ನಡೆಸುತ್ತಿದೆ. ಆದರೂ ಸೂಕ್ಷ್ಮ ಪ್ರದೇಶ ಎನಿಸಿರುವ ಕಡೆಗಳಲ್ಲಿ ಹಬ್ಬ ಆಚರಣೆಯನ್ನು ನಿಷೇಧಿಸಿ ಜಿಲ್ಲಾಡಳಿತ ಆದೇಶ ಹೊರಡಿಸಿದೆ.

ಜಿಲ್ಲೆಯ ವಿವಿಧ ಗ್ರಾಮ ಹಾಗೂ ನಗರ ಪ್ರದೇಶಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಹಿತದೃಷ್ಟಿಯಿಂದ 2026ರ ಮೊಹರಂ ಹಬ್ಬವನ್ನು ಸಾರ್ವಜನಿಕವಾಗಿ ಆಚರಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳಾದ ನಾಗೇಂದ್ರ ಪ್ರಸಾದ್ ಕೆ. ಅವರು ಆದೇಶದಲ್ಲಿ ತಿಳಿಸಿದ್ದಾರೆ. ಜಿಲ್ಲಾ ಪೊಲೀಸ್ ಅಧೀಕ್ಷಕರು ನೀಡಿದ ವರದಿಯನ್ವಯ, ಹಳೆಯ ವೈಷಮ್ಯಗಳ ಕಾರಣದಿಂದಾಗಿ ಹಬ್ಬದ ಸಂದರ್ಭದಲ್ಲಿ ಶಾಂತಿ ಭಂಗ ಉಂಟಾಗುವ ಸಾಧ್ಯತೆಗಳಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಜೂ.17 ರಿಂದ 26 ರವರೆಗೆ ಒಟ್ಟು 10 ದಿನಗಳ ಕಾಲ ಈ ನಿಷೇಧಾಜ್ಞೆ ಜಾರಿಯಲ್ಲಿರಲಿದೆ.

ಶಸ್ತ್ರಾಸ್ತ್ರಗಳ ನಿಷೇಧ: ಶಸ್ತ್ರ, ಬಡಿಗೆ, ಬರ್ಚಿ, ಗದೆ, ಬರೆದೂಕು, ಚೂರಿ, ಕೋಲು, ಲಾಠಿ ಅಥವಾ ಶರೀರಕ್ಕೆ ಗಾಯ ಮಾಡಬಹುದಾದ ಯಾವುದೇ ವಸ್ತುಗಳನ್ನು ಒಯ್ಯುವುದನ್ನು ನಿಷೇಧಿಸಲಾಗಿದೆ.

ಸ್ಫೋಟಕಗಳ ನಿಷೇಧ: ಯಾವುದೇ ತರಹದ ದಾಹಕ (ನಾಶಕಾರಿ) ಪದಾರ್ಥ ಇಲ್ಲವೇ ಸ್ಫೋಟಕ ವಸ್ತುಗಳನ್ನು ಸಾಗಿಸುವಂತಿಲ್ಲ.

ನಿಂದನೆಗೆ ತಡೆ: ಯಾವುದೇ ವ್ಯಕ್ತಿಗಳ ಭಾವಚಿತ್ರಗಳನ್ನು ಅವಮಾನಕಾರಿಯಾದ ರೀತಿಯಲ್ಲಿ ಪ್ರದರ್ಶಿಸುವಂತಿಲ್ಲ.

ಪ್ರಚೋದನೆಗೆ ನಿರ್ಬಂಧ: ಬಹಿರಂಗವಾಗಿ ಪ್ರಚೋದನಾಕಾರಿ ಘೋಷಣೆ ಕೂಗುವುದು, ಪದ ಹಾಡುವುದು, ವಾದ್ಯ ಬಾರಿಸುವುದು, ಸಭ್ಯತೆ ಅಥವಾ ನೀತಿಯನ್ನು ಉಲ್ಲಂಘಿಸುವ ಯಾವುದೇ ಸನ್ನೆ ಅಥವಾ ವಸ್ತುಗಳ ಪ್ರದರ್ಶನವನ್ನು ನಿರ್ಬಂಧಿಸಲಾಗಿದೆ.

ಸಾರ್ವಜನಿಕ ಸಂಚಾರ: ಗುಂಪುಗೂಡಿ ಸಾರ್ವಜನಿಕವಾಗಿ ಮೆರವಣಿಗೆ ಮಾಡುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ.

ಈ ಆದೇಶವನ್ನು ಉಲ್ಲಂಘಿಸಿ ಕಾನೂನು ಕೈಗೆತ್ತಿಕೊಳ್ಳುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು. ನಿಯಮ ಮೀರಿ ಬಳಸುವ ವಸ್ತುಗಳನ್ನು ಪೊಲೀಸ್ ಅಧಿಕಾರಿಗಳು ಜಪ್ತಿ ಮಾಡಿ ಸರ್ಕಾರಕ್ಕೆ ಜಮಾ ಮಾಡಲಿದ್ದಾರೆ ಎಂದು ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಸ್ಮಾರ್ಟ್ ಮೀಟರ್ ಅನುಷ್ಠಾನ ಈಗ ಸ್ಥಗಿತ

■ ಪ್ರಕಾಶ್ ಭಟ್

ಸಂಯುಕ್ತ ಕರ್ನಾಟಕ ವಿಶೇಷ ವರದಿ

ಪಣಜಿ: ಈಗಾಗಲೇ ಗೋವಾದ ವಿವಿದೆಡೆ ಅಳವಡಿಸಿರುವ ಸ್ಮಾರ್ಟ್ ಮೀಟರ್‌ಗಳಿಂದಾಗಿ ವಿದ್ಯುತ್ ಬಿಲ್‌ಗಳು ಹೆಚ್ಚಾಗುತ್ತಿರುವ ಕುರಿತ ವಿವಿಧ ದೂರುಗಳಿಂದಾಗಿ, ಸ್ಮಾರ್ಟ್ ಮೀಟರ್‌ಗಳ ಅನುಷ್ಠಾನವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ವಿದ್ಯುತ್ ಇಲಾಖೆಗೆ ಆದೇಶಿಸಲಾಗಿದೆ ಎಂದು ಮುಖ್ಯಮಂತ್ರಿ ಡಾ. ಪ್ರಮೋದ್ ಸಾವಂತ್ ಮಾಹಿತಿ ನೀಡಿದ್ದಾರೆ. ಗ್ರಾಹಕರ ಅನುಮೋದಿತ ವಿದ್ಯುತ್ ಲೋಡ್ ಅನ್ನು ಪರಿಶೀಲಿಸಲು ಮತ್ತು ವಿದ್ಯುತ್ ಬಿಲ್‌ಗಳನ್ನು ಪರಿಶೀಲಿಸಲು ನಿರ್ದೇಶನ ನೀಡಿದ್ದಾರೆ.

ವಿರೋಧ ಪಕ್ಷಗಳು ಸೇರಿದಂತೆ ವಿವಿಧ ಸಂಘಟನೆಗಳು ಸ್ಮಾರ್ಟ್ ಮೀಟರ್ ಯೋಜನೆಗೆ ಆಕ್ಷೇಪ ವ್ಯಕ್ತಪಡಿಸಿವೆ. ರಾಜ್ಯದಲ್ಲಿ ಸ್ಮಾರ್ಟ್ ಮೀಟರ್‌ಗಳ ಅಳವಡಿಕೆಯ ನಂತರ ವಿದ್ಯುತ್ ಬಿಲ್‌ಗಳಲ್ಲಿ ಭಾರಿ ಏರಿಕೆಯಾಗಿದೆ ಎಂದು ಸರ್ಕಾರಕ್ಕೆ ಹಲವು ದೂರುಗಳು ಬಂದಿವೆ. ಸ್ಮಾರ್ಟ್ ಮೀಟರ್ ಸಮಸ್ಯೆಯನ್ನು ಪರಿಶೀಲಿಸಲಾಗಿದೆ. ಅನುಮೋದಿತ ಸಾಮರ್ಥ್ಯಕ್ಕಿಂತ ಹೆಚ್ಚು ವಿದ್ಯುತ್



ಬಳಸಿದವರಿಗೆ ದಂಡ ವಿಧಿಸಲಾಗಿದೆ. ವಿದ್ಯುತ್ ಬಿಲ್ ಮತ್ತು ಬಿಲ್‌ಗಳನ್ನು ಪರಿಶೀಲಿಸಲು ಆದೇಶ ನೀಡಲಾಗಿದೆ. ಹೆಚ್ಚುವರಿ ಬಿಲ್ ಬಂದಿದ್ದರೆ, ಅವರು ಸಂಬಂಧಪಟ್ಟ ವಿದ್ಯುತ್ ಕಚೇರಿಗೆ ಹೋಗಿ ಪರಿಶೀಲಿಸಬೇಕು. ದಂಡದಿಂದಾಗಿ ಹೆಚ್ಚಿದ ಬಿಲ್‌ಗಳನ್ನು ತಾತ್ಕಾಲಿಕವಾಗಿ ಪಾವತಿಸದಿದ್ದರೆ, ಅವರವಿದ್ಯುತ್‌ಸಂಪರ್ಕಕಡಿತಗೊಳಿಸಲಾಗುವುದಿಲ್ಲ ಎಂದು ಮುಖ್ಯಮಂತ್ರಿ ಡಾ. ಪ್ರಮೋದ್ ಸಾವಂತ್ ಮಾಹಿತಿ ನೀಡಿದ್ದಾರೆ.

ವಿದ್ಯುತ್ ಇಲಾಖೆ ಅಧಿಕಾರಿಗಳ ಮಾಹಿತಿಯ ಪ್ರಕಾರ, ಅನೇಕ ಮನೆಗಳಲ್ಲಿ ಹೆಚ್ಚಿನ ಎಸಿಗಳು, ಇಂಡಕ್ಷನ್ ಸ್ಟೌವ್‌ಗಳು, ವಿದ್ಯುತ್ ಹೀಟರ್‌ಗಳು ಮತ್ತು ಇತರ ಉಪಕರಣಗಳ ಬಳಕೆಯಿಂದಾಗಿ ವಿದ್ಯುತ್ ಬಿಲ್ ಗಮನಾರ್ಹವಾಗಿ ಹೆಚ್ಚಾಗಿದೆ. ಗ್ರಾಹಕರು ಅದಕ್ಕೆ ಅನುಗುಣವಾಗಿ ವಿದ್ಯುತ್ ಇಲಾಖೆಯಿಂದ ಅನುಮೋದಿತ ಲೋಡ್ ಅನ್ನು ಹೆಚ್ಚಿಸಿಲ್ಲ. ಆದ್ದರಿಂದ, ಹೆಚ್ಚುವರಿ ಲೋಡ್ ಬಳಸುವುದಕ್ಕಾಗಿ ದಂಡವನ್ನು ವಿಧಿಸಲಾಗುತ್ತಿದೆ ಎಂಬ ಮಾಹಿತಿ ನೀಡಿದ್ದಾರೆ.

ಅಕ್ಟೋಬರ್ 2025 ರಿಂದ ವಿದ್ಯುತ್ ಬಿಲ್‌ಗಳನ್ನು ವಿಧಿಸುವ ವಿಧಾನವನ್ನು ಬದಲಾಯಿಸಲಾಗಿದೆ ಎಂದು ಸಹಾಯಕ ಎಂಜಿನಿಯರ್ ಮಿಲಿಂದ್ ದೇಸಾಯಿ ಹೇಳಿದರು. ಈ ಹಿಂದೆ, ಬಳಸಿದ ಘಟಕದ ಆಧಾರದ ಮೇಲೆ ಮಾತ್ರ ಬಿಲ್ ವಿಧಿಸಲಾಗುತ್ತಿತ್ತು. ಈಗ 'ಬೇಡಿಕೆ ಆಧಾರಿತ ಬಿಲ್ಲಿಂಗ್' ವಿಧಾನವನ್ನು ಜಾರಿಗೆ ತರಲಾಗಿದೆ. ವಿದ್ಯುತ್ ಸಂಪರ್ಕ ಪಡೆಯುವಾಗ, ಗ್ರಾಹಕರಿಗೆ ನಿರ್ದಿಷ್ಟ ಲೋಡ್‌ಗೆ ಅನುಮೋದನೆ ನೀಡಲಾಗುತ್ತದೆ. ಈ ಲೋಡ್ ಅನ್ನು ಹೆಚ್ಚಿಸಬೇಕಾದರೆ, ಅಧಿಕೃತ ವಿದ್ಯುತ್ ಗುತ್ತಿಗೆದಾರರಿಂದ ಪರೀಕ್ಷಾ ವರದಿಯನ್ನು ಪಡೆದು ವಿದ್ಯುತ್ ಇಲಾಖೆಗೆ ಸಲ್ಲಿಸುವುದು ಅವಶ್ಯಕ. ನಂತರವೇ ಹೆಚ್ಚಿದ ಲೋಡ್ ಅನ್ನು ಅನುಮೋದಿಸಲಾಗುತ್ತದೆ. ಈ ಅಗತ್ಯ ಕಾರ್ಯವಿಧಾನವನ್ನು ಪೂರ್ಣಗೊಳಿಸದೆ ಅನೇಕ ಗ್ರಾಹಕರು ತಮ್ಮ ಬಳಕೆಯನ್ನು ಹೆಚ್ಚಿಸಿಕೊಂಡಿದ್ದಾರೆ ಮತ್ತು ಹೆಚ್ಚಿದ ಬಿಲ್‌ಗಳನ್ನು ಎದುರಿಸುತ್ತಿದ್ದಾರೆ ಎಂದು ಇಲಾಖೆ ಸ್ಪಷ್ಟಪಡಿಸಿದೆ.

ಲಾಡ್ಜ್ ಮೇಲೆ ದಾಳಿ: ಮೂವರು ಮಹಿಳೆಯರ ರಕ್ಷಣೆ

ಸಂ.ಕ ಸಮಾಚಾರ ಹೊಸಪೇಟೆ: ತಮಗೆ ಬಂದ ಖಚಿತ ಮಾಹಿತಿಯ ಮೇರೆಗೆ ಲಾಡ್ಜ್ ವೊಂದರ ಮೇಲೆ ದಾಳಿ ನಡೆಸಿರುವ ಪೊಲೀಸರು ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ಮೂವರು ಮಹಿಳೆಯರನ್ನು ರಕ್ಷಿಸಿದ್ದಾರೆ.

ನಗರದ ಎಪಿಎಂಸಿ ಬಳಿಯ ಬಾಲಾಜಿ ಲಾಡ್ಜ್ ನಲ್ಲಿ ವೇಶ್ಯಾವಾಟಿಕೆ ನಡೆಯುತ್ತಿರುವ ಕುರಿತು ಪೊಲೀಸರಿಗೆ ಬಂದ ಮಾಹಿತಿ ಹಿನ್ನೆಲೆಯಲ್ಲಿ ಬುಧವಾರ ರಾತ್ರಿ ಲಾಡ್ಜ್ ಮೇಲೆ ದಾಳಿ ನಡೆಸಿರುವ ಬಡಾವಣೆ ಠಾಣೆ ಪೊಲೀಸರು, ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ಮೂವರು ಮಹಿಳೆಯರನ್ನು ರಕ್ಷಿಸಿ, ಏಳು ಜನರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಈ ಕುರಿತು ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಗಾಗಿದೆ. ಅಡಿಷನಲ್ ಎಸ್ಪಿ ಜಿ.ಮಂಜುನಾಥ ನೇತೃತ್ವದಲ್ಲಿ ಜರುಗಿದ ದಾಳಿಯಲ್ಲಿ ಟಿ.ಬಿ.ಡ್ಯಾಂ ವೃತ್ತದ ಪಿಐ ಮಹಮದ್ ಗೌಸ್, ಪಿಎಸೈ ಶಿವಕುಮಾರ್ ನಾಯ್ಕ ಮತ್ತವರ ಸಿಬ್ಬಂದಿ ಭಾಗವಹಿಸಿದ್ದರು.

ಪೇಟೆ ಪ್ರಪಂಚ

ಹುಬ್ಬಳ್ಳಿ